# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 387

ಉತ್ತರ ದಿನಾಂಕ : 15.09.2022

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಜಲ ಜೀವನ್ ಮಿಷನ್ (ಜೆ.ಜೆ.ಎಂ) ಯೋಜನೆಯಡಿಯಲ್ಲಿ "ನಲ್ಲಿ ನೀರಿನ ಸಂಪರ್ಕ" ಕಲ್ಪಿಸಲು ರಾಜ್ಯದಲ್ಲಿ ಎಷ್ಟು ಗ್ರಾಮೀಣ ಭಾಗದ ಮನೆಗಳನ್ನು ಗುರುತಿಸಲಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ರಾಜ್ಯದ ಎಲ್ಲಾ 101.18 ಲಕ್ಷ ಗ್ರಾಮೀಣ ಮನೆಗಳಿಗೆ ಜಲ ಜೀವನ್ ಮಿಷನ್ (ಜೆ.ಜೆ.ಎಂ) ಯೋಜನೆಯಡಿಯಲ್ಲಿ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸಲು ಯೋಜಿಸಲಾಗಿದೆ. ಜಿಲ್ಲಾವಾರು ವಿವರ ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ಈ ಯೋಜನೆಯಡಿಯಲ್ಲಿ ಇದುವರೆಗೂ ಎಷ್ಟು ಮನೆಗಳಿವೆ "ನಲ್ಲಿ ನೀರಿನ ಸಂಪರ್ಕವನ್ನು" ಕಲ್ಪಿಸಲಾಗಿದೆ; | ಜಲ್ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಈವರೆಗೆ 55.07 ಲಕ್ಷ ಮನೆಗಳಿಗೆ ನಳ ನೀರು ಸಂಪರ್ಕ ಒದಗಿಸಲಾಗಿದೆ. |
| ಇ) | ಮೇಲ್ಮೈ ಜಲಮೂಲದ ಖಚಿತತೆ ಇಲ್ಲದ ಕೋಲಾರ ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಈ) | ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಪ್ರಸ್ತುತ ಕೇಂದ್ರ ಪುರಸ್ಕೃತ "ಜಲ ಜೀವನ್ ಮಿಷನ್" ಅಡಿ ಗ್ರಾಮೀಣ ಪ್ರದೇಶಗಳಲ್ಲಿ ದಿನವೊಂದಕ್ಕೆ ವ್ಯಕ್ತಿಯೊಬ್ಬರಿಗೆ ಸರಾಸರಿ 55 ಲೀಟರ್ ನಂತೆ ಜನರಿಗೆ ಮನೆ ನಳ ಸಂಪರ್ಕ ಮೂಲಕ 2024ರ ಅಂತ್ಯದೊಳಗೆ ಶುದ್ಧ ಕುಡಿಯುವ ನೀರನ್ನು ಪೂರೈಸುವ ಗುರಿ ಹೊಂದಲಾಗಿದೆ.<br><br>ಮೇಲ್ಮೈ ಜಲಮೂಲ ಲಭ್ಯವಿರುವ ಕಡೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಮುಖಾಂತರ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಜೆ.ಜೆ.ಎಂ ಯೋಜನೆಗಳನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. |

ಮೇಲ್ಮೈ ಜಲಮೂಲಗಳು ಲಭ್ಯವಿಲ್ಲದೇ ಇರುವ ಕಡೆ ಕೆರೆಗಳನ್ನು ಪುನಃಶ್ಚೇತನಗೊಳಿಸಿ ಅಂತರ್ಜಲ ಮಟ್ಟವನ್ನು ವೃದ್ಧಿಸಿ, ಕೊಳವೆ ಬಾವಿಗಳ ಮುಖಾಂತರ ಗ್ರಾಮೀಣ ಜನವಸತಿಗಳಿಗೆ ನೀರು ಪೂರೈಕೆ ಮಾಡಲು ಯೋಜಿಸಲಾಗಿದೆ.

ಉ) ಇದುವರೆಗೂ ಈ ಯೋಜನೆಯನ್ನು ಸಾಕಾರಗೊಳಿಸಲು ಸರ್ಕಾರ ವೆಚ್ಚ ಮಾಡಲಾಗಿರುವ ಹಣವೆಷ್ಟು; ಇದರಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಹಣವೆಷ್ಟು?

ಈವರೆಗೆ ರಾಜ್ಯಾದ್ಯಂತ ಯೋಜನೆಯನ್ನು ಸಾಕಾರಗೊಳಿಸಲು ಸರ್ಕಾರ ಮಾಡಲಾಗಿರುವ ವೆಚ್ಚದ ವಿವರಗಳು ಕೆಳಕಂಡಂತಿವೆ;

**(ರೂ. ಕೋಟಿಗಳಲ್ಲಿ)**

| ಕ್ರ. ಸಂ | ವರ್ಷ | ವೆಚ್ಚದ ವಿವರ | | ಒಟ್ಟು ವೆಚ್ಚ |
|---|---|---|---|---|
| | | ರಾಜ್ಯ ಸರ್ಕಾರ | ಕೇಂದ್ರ ಸರ್ಕಾರ | |
| 1 | 2019-20 | 0.00 | 492.24 | 492.24 |
| 2 | 2020-21 | 416.38 | 349.62 | 766.00 |
| 3 | 2021-22 | 1557.92 | 1418.56 | 2976.48 |
| 4 | 2022-23 | 628.34 | 586.82 | 1215.16 |
| | ಒಟ್ಟು | **2,602.64** | **2,847.24** | **5,449.88** |

ಸಂ:ಗ್ರಾಕುನೀ&ನೈಇ 436 ಗ್ರಾನೀಸ(4)2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 387ರ ಉತ್ತರ

## ಅನುಬಂಧ

| ಕ್ರ.ಸಂ | ಜಿಲ್ಲೆಗಳು | ಒಟ್ಟು ಮನೆಗಳ ಸಂಖ್ಯೆ | ನಳ ಸಂಪರ್ಕ ಕಲ್ಪಿಸಿರುವ ಒಟ್ಟು ಮನೆಗಳ ಸಂಖ್ಯೆ | ನೀರು ಪೂರೈಸಿರುವ ಒಟ್ಟು ಮನೆಗಳ ಶೇಕಡಾವಾರು (%) |
|---|---|---|---|---|
| 1 | ಗದಗ | 2,00,113 | 1,96,689 | 98.29 |
| 2 | ಧಾರವಾಡ | 2,04,091 | 1,97,154 | 96.53 |
| 3 | ದಕ್ಷಿಣ ಕನ್ನಡ | 3,34,184 | 2,61,356 | 78.21 |
| 4 | ಕೊಪ್ಪಳ | 3,05,419 | 2,43,225 | 79.64 |
| 5 | ಮಂಡ್ಯ | 3,96,328 | 3,11,283 | 78.54 |
| 6 | ಹಾವೇರಿ | 2,94,578 | 2,17,973 | 74 |
| 7 | ಚಾಮರಾಜನಗರ | 2,51,867 | 1,78,529 | 70.88 |
| 8 | ಬಾಗಲಕೋಟೆ | 3,34,702 | 2,39,261 | 71.48 |
| 9 | ರಾಮನಗರ | 2,31,118 | 1,61,859 | 70.03 |
| 10 | ಶಿವಮೊಗ್ಗ | 3,09,414 | 2,14,479 | 69.32 |
| 11 | ಕೊಡಗು | 1,35,935 | 90,290 | 66.42 |
| 12 | ರಾಯಚೂರು | 3,62,123 | 2,29,256 | 63.31 |
| 13 | ದಾವಣಗೆರೆ | 2,59,439 | 1,70,170 | 65.59 |
| 14 | ಉಡುಪಿ | 2,47,188 | 1,56,045 | 63.13 |
| 15 | ಬೆಳಗಾವಿ | 8,52,433 | 4,75,488 | 55.78 |
| 16 | ಚಿಕ್ಕಮಗಳೂರು | 2,41,262 | 1,34,426 | 55.72 |
| 17 | ಯಾದಗಿರಿ | 2,32,515 | 1,18,739 | 51.07 |
| 18 | ಮೈಸೂರು | 4,99,675 | 2,52,824 | 50.6 |
| 19 | ಚಿತ್ರದುರ್ಗ | 3,80,983 | 1,84,317 | 48.72 |
| 20 | ವಿಜಯಪುರ | 4,64,370 | 2,19,605 | 48.29 |
| 21 | ಬಳ್ಳಾರಿ | 2,03,327 | 95,292 | 46.87 |
| 22 | ಕಲಬುರಗಿ | 4,56,182 | 2,12,470 | 46.58 |
| 23 | ಹಾಸನ | 4,31,593 | 1,94,468 | 45.06 |
| 24 | ಬೀದರ್ | 3,14,882 | 1,38,711 | 44.05 |
| 25 | ಉತ್ತರ ಕನ್ನಡ | 2,86,087 | 1,22,973 | 42.98 |
| 26 | ತುಮಕೂರು | 5,64,928 | 2,09,448 | 37.08 |
| 27 | ವಿಜಯನಗರ | 2,77,645 | 76,966 | 27.72 |
| 28 | ಕೋಲಾರ | 2,71,971 | 60,721 | 22.33 |
| 29 | ಚಿಕ್ಕಬಳ್ಳಾಪುರ | 2,47,587 | 54,866 | 22.16 |
| 30 | ಬೆಂಗಳೂರು ಗ್ರಾಮಾಂತರ | 3,17,279 | 54,427 | 17.15 |
| 31 | ಬೆಂಗಳೂರು ನಗರ | 2,08,906 | 33,802 | 16.18 |
| | **ಒಟ್ಟು** | **1,01,18,124** | **55,07,112** | **55.15** |

**Chief Engineer**
Rural Drinking Water & Sanitation Department
2nd Floor, 'E' Block, KHB Complex,
Cauvery Bhavan, K. G. Road, Bangalore-9.